ಕ್ಲಾಸಿನಲ್ಲಿ ಪಾಸು ಮಾಡ್ದೆ. ಯಾವ ಕೆಲ್ಸಾನೂ ಸಿಗದೆ ಕಡೆಗೆ ಎಸ್ಡಿಸಿ ಪರೀಕ್ಷೆ ಪಾಸಾಗಿ ಇಲ್ಲಿ ಬಂದು ಬಿದ್ದಿದ್ದೀನಿ. ನಮ್ಮೂರಲ್ಲಿ ನಂಗಿಂತ ಹತ್ತೊರ್ಷ ಹಿಂದೆ ಹುಟ್ಟಿದೋರು ಕಂಪ್ಯೂಟರ್ ಎಂಜಿನಿಯರಿಂಗ್ ಮಾಡ್ಕೊಂಡು ಇನ್ಫೋಸಿಸ್‌ನಲ್ಲಿ ಕೆಲಸಕ್ಕೆ ಸೇರ್ಕಂಡು ತಿಂಗಳಿಗೆ ಲಕ್ಷದ ಮೇಲೆ ಸಂಬಳ ತಗೊತಿದಾರೆ. ಅವ್ರ ಮಜಾ, ಖುಷಿ ನೋಡ್ಬೇಕು. ಅವ್ರು ಊರ್ಗೆ ತರಾವರಿ ಕಾರುಗಳಲ್ಲಿ ಬಂದ್ರೆ, ನಾನು ಈಗ್ಲೂ ಕೆಂಪು ಬಸ್ಸಿನಲ್ಲೇ ತಿರುಗಾಡ್ತ ಇದ್ದೀನಿ.'' ಎಂದು ಒಂದು ಸಣ್ಣ ಲೆಕ್ಚರ್ ಕೊಟ್ಟಿದ್ದ, ಹೊಟ್ಟೆಯಲ್ಲೊಂದಿಷ್ಟು ಕೆಂಡ ತುಂಬಿಕೊಂಡು. ರವಿ ನಾಯಕನ ಮಾತುಗಳಲ್ಲಿ ಸತ್ಯ ತುಂಬಿ ತುಳುಕುತ್ತಿತ್ತು. ಪೆಂಚಾಲಯ್ಯ, ದೇವೇಗೌಡ ಇಬ್ಬರೂ ಬಂದ ದಾರಿಗೆ ಸುಂಕವಿಲ್ಲ ಎಂದು ಸ್ಕೂಟರ್ ಹತ್ತಿ ಎಸ್ಸೆಸ್ಸೆಲ್ಸಿ ಬೋರ್ಡ್ ಕಾಂಪೌಂಡ್ ಖಾಲಿ ಮಾಡಿದ್ದರು.

ಮಾರನೆಯ ದಿನ ಆಫೀಸು ಪ್ರಾರಂಭವಾದ ಗಂಟೆಯ ಮೇಲೆ ದೇವೇಗೌಡ ಪೆಂಚಾಲಯ್ಯನನ್ನು ಕರೆದುಕೊಂಡು ಅಡಿಷನಲ್ ಕಮಿಷನರ್ ರಾಜೇಂದ್ರ ಪ್ರಸಾದ್ ಚೇಂಬರ್ ಮುಂದೆ ನಿಂತಿದ್ದ. ರಾಜೇಂದ್ರ ಪ್ರಸಾದ್ ಮಾತ್ರ ಇಲಾಖೆಯವರೇ ಆಗಿದ್ದು, ಕ್ಲಾಸ್ ಒನ್ ಆಫೀಸರ್ ಆಗಿ ಸೇರಿದ್ದವರು ಪ್ರೊಮೋಶನ್ ಮೇಲೆ ಉನ್ನತ ಹುದ್ದೆಯನ್ನು ಅಲಂಕರಿಸಿದ್ದರು. ಇಲಾಖೆಯಲ್ಲಿ ಕಮಿಷನರ್ ಆದ ಅನಂತರ ಅವರೇ ಹೆಚ್ಚು ಪವರ್ಫುಲ್ ವ್ಯಕ್ತಿಯಾಗಿದ್ದರು. ಸರಳ ಮತ್ತು ಮಾನವೀಯ ವ್ಯಕ್ತಿತ್ವವುಳ್ಳ ಮನುಷ್ಯರಾಗಿದ್ದರು. ಇಡೀ ಇಲಾಖೆಯ ಯಾವುದೇ ಹಂತದ ನೌಕರರು ಬಂದು ಭೇಟಿಯಾಗಿ ತೊಂದರೆಗಳನ್ನು ಹೇಳಿಕೊಂಡರೂ ಸಮಾಧಾನದಿಂದ ಆಲಿಸಿ ನ್ಯಾಯಯುತ ಪರಿಹಾರಗಳನ್ನು ಹೇಳುತ್ತಿದ್ದರು. ಅವರನ್ನು ಕಂಡರೆ ಕೆಳಗಿನ ಎಲ್ಲಾ ಅಧಿಕಾರಿಗಳೂ ಹೆದರುತ್ತಿದ್ದದ್ದು ಅವರ ಜಾತ್ಯತೀತ, ಪ್ರಾಮಾಣಿಕ ಮನೋಭಾವದಿಂದಾಗಿ. ಪಿ.ಎ ಇಂಟರ್ ಕಾಮ್‌ನಲ್ಲಿ ವಿಷಯ ತಿಳಿಸಿದಾಗ ಸಾಹೇಬರು ಇಬ್ಬರನ್ನೂ ಒಳಗೆ ಕಳುಹಿಸಲು ಹೇಳಿದ್ದರು. ಪೆಂಚಾಲಯ್ಯನ ಮುಖ ನೋಡಿ ಸಾಹೇಬರಿಗೆ ಅಯ್ಯೋ ಪಾಪ ಅನಿಸಿತ್ತು. ಕೂತುಕೊಳ್ಳಲು ಹೇಳಿದಾಗ ಇಬ್ಬರೂ ಕೈಕಟ್ಟಿಕೊಂಡು ಮುದುಡಿಕೊಂಡೇ ಚೇರುಗಳ ಮೇಲೆ ಕುಳಿತರು. ''ಮುಂದೇನು ಮಾಡೋದು ಹೇಳ್ರಿ?'' ಎಂದು ಅಡಿಷನಲ್ ಕಮಿಷನರ್ ದೇವೇಗೌಡನ ಕಡೆ ನೋಡಿಕೊಂಡು ಕೇಳಿದ್ದರು. ದೇವೇಗೌಡ ಹಿಂದಿನ ದಿನ ನಡೆದ ಎಲ್ಲಾ ವಿದ್ಯಮಾನಗಳ ಬಗ್ಗೆ ಚಾಚೂ ತಪ್ಪದೆ ಹೇಳಿದ್ದ. ಮಾಳಿಗಚಾರ್ ಹೆಸರೇಳಿದಾಗ ರಾಜೇಂದ್ರ ಪ್ರಸಾದ್ ಸಾಹೇಬರು ಸ್ವಲ್ಪ ಹುಬ್ಬೇರಿಸಿ, ''ಅವ್ರು ಟೆಕ್ನಿಕಲಿ ಭಾರಿ ಸ್ಟ್ರಾಂಗ್ ಇದಾರ್ರಿ, ಒಂದೆರಡು ಇಶ್ಯೂಗಳಲ್ಲಿ ನಾನೂ ಕರೆಸಿ ಒಪಿನಿಯನ್ ತಗೊಂಡಿದ್ದೀನಿ. ಇನ್ನೊಂದರ್ಧ ಗಂಟೇಲಿ ಬರೋದಾದ್ರೆ ನೋಡ್ರಿ ಮಾತನಾಡೋಣ, ನಾನೂ ಸ್ವಲ್ಪ ಬಿಡುವಾಗಿದೀನಿ.'' ಎಂದ ತಕ್ಷಣ, ''ಆಯ್ತು ಸಾರ್.'' ಎಂದು ಇಬ್ಬರೂ ಹೊರಗೆ ಬಂದು ಕಾಣಿಕ್ಯರಾಜು ಕೂರುವ ಸೀಟಿನ ಕಡೆ ನಡೆದರು. ತಲೆ ಬಗ್ಗಿಸಿಕೊಂಡು ಯಾವುದೋ ಫೈಲು ನೋಡುತ್ತಿದ್ದ ಕಾಣಿಕ್ಯರಾಜು, ''ನಿನ್ನೆ ಹೋದ ಕೆಲಸ ಏನಾಯ್ತು ದೇವೇಗೌಡ್ರೆ.'' ಎಂದು ಆತುರ ತೋರಿದ್ದ. ದೇವೇಗೌಡ ಒಂದೇ ನಿಮಿಷದಲ್ಲಿ ನಿನ್ನೆ ನಡೆದದ್ದನ್ನು ಹೇಳಿ, ರಾಜೇಂದ್ರ ಪ್ರಸಾದ್ ಸಾಹೇಬರು ಮಾಳಿಗಚಾರರನ್ನು ಕರೆಸುವ ಬಗ್ಗೆ ಹೇಳಿದ್ದನ್ನು ತಿಳಿಸಿದ್ದ. ಕೂಡಲೇ ಕಾಣಿಕ್ಯರಾಜು ಮಾಳಿಗಚಾರಿಗೆ ಫೋನ್ ಮಾಡಿ ಸಾಹೇಬರ ಇಂಗಿತವನ್ನು ತಿಳಿಸಿದ್ದ.

ಫೋನ್ ಮಾಡಿದ ಅರ್ಧ ಗಂಟೆಯಲ್ಲಿ ಮಾಳಿಗಚಾರ್ ಬಂದಿದ್ದ. ನಾಲ್ಕೂ ಜನರೂ ಒಟ್ಟುಗೂಡಿ ಸಾಹೇಬರ ಚೇಂಬರನ್ನು ಪ್ರವೇಶಿಸಿದ್ದರು. ಸಾಹೇಬರು ಮಾಳಿಗಚಾರ್ ಯೋಗಕ್ಷೇಮ ವಿಚಾರಿಸಿಕೊಂಡಿದ್ದರು. ಬಿಸಿಬಿಸಿ ಚಹಾ ಬಂದಿತ್ತು. ಚಹಾ ಕುಡಿದು ಮುಗಿದ ಅನಂತರ, ''ಹೇಳಿ ಮಾಳಿಗಚಾರ್, ಮುಂದೆ ಏನು ಮಾಡಬಹುದು.'' ಎಂದು ನಕ್ಕಿದ್ದರು. ಮಾಳಿಗಚಾರ್ ಎರಡೂ ಕೈ ಕಟ್ಟಿಕೊಂಡು ಸಾಹೇಬರ ಸೀಟಿಗೆ ನೆಟ್ಟಗೆ ಮೇಲೆ ಗೋಡೆಗೆ ನೇತಾಕ್ಕಿದ್ದ ಮಹಾತ್ಮ ಗಾಂಧಿಯವರ ಫೋಟೊ ಕಡೆಗೊಮ್ಮೆ ನೋಡಿ, ''ಸಾಹೇಬ್ರ, ನೀವು ತುಂಬಾ ತಿಳಿದೋರು. ಪೆಂಚಾಲಯ್ಯ ಬೇಕಾಗಿಯೇ